4

## ಕರ್ನಾಟಕ ಸರ್ಕಾರ

ಸಂ: ಗ್ರಾಅಪ/03/ಗ.ಕೋಶ–2013

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:20.09.2013

## ಸುತ್ತೋಲೆ

ವಿಷಯ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಡಿಯಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ಕಾಮಗಾರಿಗಳ ಪಾವತಿಯನ್ನು ವರ್ಕ್‌ಸಾಫ್ಟ್ ತಂತ್ರಾಂಶದ ಮೂಲಕ ಮಾಡುವ ಕುರಿತು.

******

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವಿವಿಧ ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನ ಪ್ರಕ್ರಿಯೆಯಲ್ಲಿ ಸೂಕ್ತ ಶಿಸ್ತು ಮತ್ತು ನಿಯಂತ್ರಣವನ್ನು ತರಲು ವರ್ಕ್‌ಸಾಫ್ಟ್ ಎಂಬ ತಂತ್ರಾಂಶವನ್ನು ರಾಷ್ಟ್ರೀಯ ಮಾಹಿತಿ ಕೇಂದ್ರ(NIC)ದವರಿಂದ ಅಭಿವೃದ್ಧಿಪಡಿಸಲಾಗಿರುತ್ತದೆ. ಇದರಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಅನುಷ್ಠಾನಗೊಳ್ಳುವ ಎಲ್ಲಾ ಅಭಿವೃದ್ಧಿ ಕಾಮಗಾರಿಗಳ ಕ್ರಿಯಾಯೋಜನೆ ತಯಾರಿ, ಆಡಳಿತಾತ್ಮಕ ಮಂಜೂರಾತಿ, ತಾಂತ್ರಿಕ ಮಂಜೂರಾತಿ, ಟೆಂಡರ್ ಪ್ರಕ್ರಿಯೆ ವಿವರಗಳು ಮತ್ತು ಸದರಿ ಕಾಮಗಾರಿ ಸಂಬಂಧದ ಬಿಲ್ಲು ಪಾವತಿ ವಿವರಗಳನ್ನು ಗಣಕೀಕರಣಗೊಳಿಸಲಾಗಿರುತ್ತದೆ. ಈ ತಂತ್ರಾಂಶದ ಬಳಕೆಯನ್ನು ದಿನಾಂಕ:02.10.2013 ರಿಂದ ಅನುಬಂಧದಲ್ಲಿ ಲಗತ್ತಿಸಿದ ಯೋಜನೆಗಳಿಗೆ ಕಡ್ಡಾಯಗೊಳಿಸಲಾಗುತ್ತಿದೆ. ಈ ಯೋಜನೆಗಳಡಿ ತೆಗೆದುಕೊಳ್ಳುವ ಕಾಮಗಾರಿಗಳಿಗೆ ದಿನಾಂಕ:03.10.2013 ರಿಂದ ತಂತ್ರಾಂಶದ ಹೊರಗಡೆ ಬಿಲ್ಲು ಪಾವತಿಸುವುದನ್ನು ನಿಷೇಧಿಸಲಾಗಿದೆ.

ಇದನ್ನು ಖಚಿತಪಡಿಸಲು ಸಂಬಂಧಪಟ್ಟ ಹಣ ಸೆಳೆಯುವ ಮತ್ತು ಬಟವಾಡೆ ಅಧಿಕಾರಿಗಳು, ವರ್ಕ್‌ಸಾಫ್ಟ್ ತಂತ್ರಾಂಶದಿಂದ ಸೃಜಿಸಲಾದ 'ಪಾವತಿ ಆದೇಶ(Payment Advice)' ನ್ನು (ಕಾಮಗಾರಿ ಬಿಲ್ಲಿನೊಂದಿಗೆ) ಲಗತ್ತಿಸಬೇಕಾಗುತ್ತದೆ. ಇದರಲ್ಲಿ ಕಾಮಗಾರಿಯ ಹೆಸರು, ಯೋಜನೆಯ ಹೆಸರು, ಲೆಕ್ಕಶೀರ್ಷಿಕೆ, ಟೆಂಡರ್ ವಿವರಗಳು, ಕಾಮಗಾರಿ ಆದೇಶ ಮತ್ತು ಮೊತ್ತ ಹಾಗೂ ಪ್ರಸ್ತುತ ಬಿಲ್ಲಿನ ಮೊತ್ತ ಮುಂತಾದ ವಿವರಗಳನ್ನು ಅಳವಡಿಸಲಾಗಿದೆ (ಮಾದರಿ ಪ್ರತಿ ಲಗತ್ತಿಸಿದೆ).

ಆದ್ದರಿಂದ ದಿನಾಂಕ:03.10.2013 ರಿಂದ ಯಾವುದೇ ಕಾರಣಕ್ಕೂ ಅನುಬಂಧದಲ್ಲಿನ ಲೆಕ್ಕಶೀರ್ಷಿಕೆಗಳಡಿಯಲ್ಲಿ ಪಾವತಿ ಆದೇಶವಿಲ್ಲದೆ ಸಲ್ಲಿಕೆಯಾಗುವ ಬಿಲ್ಲುಗಳನ್ನು ಮಾನ್ಯ ಮಾಡದಿರಲು ಖಜಾನಾಧಿಕಾರಿಗಳು ಮತ್ತು ಬ್ಯಾಂಕ್ ವ್ಯವಸ್ಥಾಪಕರಿಗೆ ಸೂಚಿಸಿದೆ. ಬ್ಯಾಂಕುಗಳ ಮೂಲಕ ಪಾವತಿಯಾಗುವ ಬಿಲ್ಲುಗಳಿಗೆ ಸಂಬಂಧಿಸಿದಂತೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ಜಿಲ್ಲೆಯ ಎಲ್ಲಾ ಬ್ಯಾಂಕುಗಳಿಗೆ ಈ ಕುರಿತು ಸೂಚನೆ ನೀಡಲು ಹಾಗೂ ಮಾಹೆಯಾನ ನಡೆಯುವ ಬ್ಯಾಂಕ್ ಅಧಿಕಾರಿಗಳ ಸಭೆಯಲ್ಲಿ ಪರಿಶೀಲಿಸಲು ಸೂಚಿಸಿದೆ. ಮುಖ್ಯ ಕಾರ್ಯಾಚರಣೆ ಅಧಿಕಾರಿಗಳು(KRRDA) ಹಾಗೂ ಪ್ರಧಾನ ವ್ಯವಸ್ಥಾಪಕರು(KRIDL) ಇವರು ತಮ್ಮ ಏಜೆನ್ಸಿ ಬ್ಯಾಂಕುಗಳಿಗೆ ಈ ಕುರಿತು ಸೂಚನೆ ನೀಡಲು ತಿಳಿಸಿದೆ.

ಅಡಕ: 1. ಕಡ್ಡಾಯವಾಗಿ ಅಳವಡಿಸಬೇಕಾಗಿರುವ ಕಾರ್ಯಕ್ರಮಗಳ ಪಟ್ಟಿ–ಅನುಬಂಧ–1.
2. ಪಾವತಿ ಆದೇಶ ನಮೂನೆ–1.

(ಟಿ.ಎಂ. ವಿಜಯ ಭಾಸ್ಕರ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಪ್ರತಿಯನ್ನು:

1. ನಿರ್ದೇಶಕರು, ಖಜಾನೆ ಇಲಾಖೆ, ಇವರಿಗೆ ಕಳುಹಿಸುತ್ತಾ ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು ಮತ್ತು ತಾಲ್ಲೂಕು ಖಜಾನಾಧಿಕಾರಿಗಳಿಗೆ ಸೂಚನೆ ನೀಡಲು ಕೋರಿದೆ.

2. ಸಹಾಯಕ ನಿರ್ದೇಶಕರು, ಟಿ.ಎನ್.ಎಂ.ಸಿ. ಖನಿಜ ಭವನ, 2ನೇ ಮಹಡಿ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು ಇವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಎಲ್ಲಾ ಜಿಲ್ಲಾ ಪಂಚಾಯತ್, ಇವರಿಗೆ ಮುಂದಿನ ಕ್ರಮಕ್ಕಾಗಿ.
4. ಜಿಲ್ಲಾ ಖಜಾನಾಧಿಕಾರಿಗಳು, ಎಲ್ಲಾ ಜಿಲ್ಲಾ ಖಜಾನೆ, ಮುಂದಿನ ಕ್ರಮಕ್ಕಾಗಿ ಹಾಗೂ ಈ ಕುರಿತು ಉಪ ಖಜಾನಾಧಿಕಾರಿಗಳಿಗೆ ಸೂಚನೆ ನೀಡಲು ತಿಳಿಸಿದೆ.
5. ಅಧೀಕ್ಷಕ ಇಂಜಿನಿಯರ್, ಕಾರ್ಯಪಾಲಕ ಇಂಜಿನಿಯರ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಸಹಾಯಕ ಇಂಜಿನಿಯರ್, ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರ್ ಇಲಾಖೆ, ಮತ್ತು PMGSY ಯೋಜನೆ.
6. ನಿರ್ದೇಶಕರು, ಕರ್ನಾಟಕ ಗ್ರಾಮೀಣ ನೀರು ಸರಬರಾಜು & ನೈರ್ಮಲ್ಯ ಸಂಸ್ಥೆ(KRWSSA), ಕಾವೇರಿ ಭವನ, ಕೆ.ಜಿ. ರೋಡ್, ಬೆಂಗಳೂರು.
7. ವ್ಯವಸ್ಥಾಪಕ ನಿರ್ದೇಶಕರು (KRIDL), ಬೆಂಗಳೂರು.
8. ಮುಖ್ಯ ಅಭಿಯಂತರರು(CE-PRED),ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
9. ಮುಖ್ಯ ಕಾರ್ಯಾಚರಣೆ ಅಧಿಕಾರಿಗಳು(COO-KRRDA), ಬೆಂಗಳೂರು
10. ಕಾರ್ಯನಿರ್ವಾಹಕ ಅಧಿಕಾರಿಗಳು, ಎಲ್ಲಾ ತಾಲ್ಲೂಕು ಪಂಚಾಯತ್.
11. ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಎಲ್ಲಾ ಗ್ರಾಮ ಪಂಚಾಯತ್.

# ಅನುಬಂಧ-1

ವರ್ಕ್‌ಸಾಫ್ಟ್ ತಂತ್ರಾಂಶಕ್ಕೆ ಅಳವಡಿಸಬೇಕಾಗಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯಕ್ರಮಗಳ ವಿವರಗಳು:

1. 13ನೇ ಹಣಕಾಸು ಆಯೋಗದ ಅನುದಾನ-ಮೂಲ ಹಾಗೂ ಕಾರ್ಯನಿರ್ವಹಣಾ ಅನುದಾನ
2. ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆ
3. ಸುವರ್ಣ ಗ್ರಾಮೋದಯ
4. ಜಿಲ್ಲಾ ಪಂಚಾಯತ್ ಕಛೇರಿ ಕಟ್ಟಡ ನಿರ್ಮಾಣದ ಅನುದಾನ
5. ಜಿಲ್ಲಾ ಪಂಚಾಯತ್ ಅಭಿವೃದ್ಧಿ ಅನುದಾನ
6. ಜಿಲ್ಲೆಯ ನವ ಪ್ರವರ್ತನಾ ನಿಧಿ
7. ತಾಲ್ಲೂಕುಗಳಿಗೆ ಸಂಯುಕ್ತ ಅನುದಾನಗಳು
8. ಪ್ರಾದೇಶಿಕ ಅಸಮತೋಲನ ನಿವಾರಣಾ ಉನ್ನತಾಧಿಕಾರ ಸಮಿತಿ ಗುರುತಿಸಿರುವ ಹಿಂದುಳಿದ ತಾಲ್ಲೂಕುಗಳಲ್ಲಿ ವಿಶೇಷ ಕಾಮಗಾರಿಗಳು-ಎಸ್.ಡಿ.ಪಿ.
9. ತಾಲ್ಲೂಕು ಪಂಚಾಯತ್‌ಗಳಿಗೆ ಅಭಿವೃದ್ಧಿಗಾಗಿ ಅನುದಾನ
10. ಹಿಂದುಳಿದ ಪ್ರದೇಶಗಳ ಅನುದಾನದ ನಿಧಿ(ಬಿ.ಆರ್.ಜಿ.ಎಫ್)
11. ಸಣ್ಣ ನೀರಾವರಿ ಕೆರೆ ನಿರ್ವಹಣಾ ಕಾಮಗಾರಿಗಳು
12. ಗ್ರಾಮ ಪಂಚಾಯತ್‌ಗಳಿಗೆ ವರ್ಗಾಯಿಸಲ್ಪಡಬಹುದಾದ ಮರಳು ಗಣಿಗಾರಿಕೆಯ ರಾಯಧನ
13. 13ನೇ ಹಣಕಾಸು ಆಯೋಗದ ಅನುದಾನ-ರಸ್ತೆ ಮತ್ತು ಸೇತುವೆಗಳ ನಿರ್ವಹಣೆ
14. 3054 ಅನುದಾನಗಳ ನಿರ್ವಹಣೆ
15. 3054 ಮುಖ್ಯ ಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ
16. 3054 ಗ್ರಾಮ ಪರಿಮಿತಿಯಲ್ಲಿ ರಸ್ತೆಗಳ ಡಾಂಬರೀಕರಣ
17. 4702 ಕೆರೆಗಳ ದುರಸ್ಥಿ ಮತ್ತು ಪುನಶ್ಚೇತನ
18. 4702 ಜಿಲ್ಲಾ ಪಂಚಾಯತ್ ಕೆರೆಗಳ ಪೂರ್ವಸ್ಥಿತಿ ಹಾಗೂ ಪುನಶ್ಚೇತನ – ಎಸ್.ಡಿ.ಪಿ.
19. 5054 ನಮ್ಮ ಗ್ರಾಮ ನಮ್ಮ ರಸ್ತೆ
20. 5054 ಗ್ರಾಮೀಣ ಸಂಪರ್ಕ
21. 5054 ಗ್ರಾಮೀಣ ಪ್ರದೇಶಗಳಲ್ಲಿ ನಬಾರ್ಡ್ ರಸ್ತೆ ಕಾಮಗಾರಿಗಳು
22. ಗ್ರಾಮೀಣ ಅಭಿವೃದ್ಧಿ ಭವನ
23. ತಾಲ್ಲೂಕು ಪಂಚಾಯತ್‌ಗಳಲ್ಲಿ ಸ್ಟಾಂಪ್ ಡ್ಯೂಟಿ ಅನುದಾನ
24. ರಾಜೀವ್ ಗಾಂಧಿ ಪಂಚಾಯತ್ ಸಶಕ್ತೀಕರಣ.